# ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ

ಕರ್ನಾಟಕ ಸರ್ಕಾರ

ಸಂಖ್ಯೆ : ಕ.ಕೆ.ಸಂ.ಅ.ಪ್ರಾ/ಬೆಂ/ತಾಂತ್ರಿಕ/08/2017–18 ದಿನಾಂಕ : 13.03.2018

ಕ್ರಮ ಸಂಖ್ಯೆ 8542
ದಿನಾಂಕ 20/3/18

## ಸುತ್ತೋಲೆ

**ವಿಷಯ : ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅನುಮೋದನೆ/ಅನುಮತಿ ಕೋರಿ ಸಲ್ಲಿಸುವ ವಿವರವಾದ ಯೋಜನಾ ವರದಿ (DPR) ಸಿದ್ದ ಪಡಿಸುವಾಗ ಕಡ್ಡಾಯವಾಗಿ ಪರಿಗಣಿಸಬೇಕಿರುವ ಪ್ರಮುಖ ಅಂಶಗಳು :-**

1. ನೀರನ್ನು ಸಂಗ್ರಹಿಸುವುದಕ್ಕಾಗಿ ಅಥವ ಹಿಡಿದಿಟ್ಟುಕೊಳ್ಳುವುದಾಗಿ ಅಥವ ಜಲಜೀವ ವೈವಿಧ್ಯ, ಜಲಪಕ್ಷಿಗಳು ಮತ್ತು ಜಲೀಯ ಸಸ್ಯಗಳನ್ನು ಸುಧಾರಿಸುವ ಮತ್ತು ಅವುಗಳಿಗೆ ಬೇಕಾದ ಪರಿಸರವನ್ನು ಸೃಜಿಸಲು ಹೊರತಾಗಿ ಇತರ ಯಾವುದೇ ಉದ್ದೇಶಕ್ಕಾಗಿ ಕೆರೆಯನ್ನು ಬಳಸತಕ್ಕದ್ದಲ್ಲ.
2. ಕೆರೆ ಭೂಮಿಯ ಮೇಲೆ ಯಾವುದೇ ರಚನೆಯನ್ನು ನಿರ್ಮಿಸತಕ್ಕದ್ದಲ್ಲ, ಯಾವುದೇ ಕೆರೆ ಭೂಮಿಯನ್ನು ಅಥವ ಅದರ ಯಾವುದೇ ಭಾಗವನ್ನು ಅಧಿಭೋಗಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.
3. ಕೆರೆಗೆ ಹರಿದು ಬರುತ್ತಿರುವ ಅಥವ ಕೆರೆಯಿಂದ ನೀರು ಹರಿದು ಹೋಗುತ್ತಿರುವ ಸ್ವಾಭಾವಿಕ ಹರಿವುಗಳಿಗೆ ಯಾವುದೇ ಅಡ್ಡಿಯನ್ನು ಉಂಟು ಮಾಡತಕ್ಕದ್ದಲ್ಲ.
4. ಕೆರೆಯ ಹೊರಗಿನ ಸರಹದ್ದಿನಿಂದ ಮೂವತ್ತು ಮೀಟರುಗಳೊಳಗೆ ಯಾವುದೇ ವಾಣಿಜ್ಯ, ಮನರಂಜನೆ ಅಥವ ಕೈಗಾರಿಕಾ ಸಂಕೀರ್ಣಗಳನ್ನು ಅಥವ ಮನೆಗಳನ್ನು ಕಟ್ಟತಕ್ಕದ್ದಲ್ಲ.
5. ಕೆರೆಯ ಒಡ್ಡು ಸೇರಿದಂತೆ ಕೆರೆ ಪ್ರದೇಶದೊಳಗೆ ರಸ್ತೆಗಳನ್ನು ಸೇತುವೆಗಳನ್ನು ಮತ್ತು ಅದೇ ರೀತಿಯ ಇತರ ರಚನೆಗಳನ್ನು ಸರ್ಕಾರದ ಮತ್ತು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅನುಮತಿ ಇಲ್ಲದೆ ನಿರ್ಮಿಸತಕ್ಕದಲ್ಲ. ಅತ್ಯಂತ ಅವಶ್ಯವಾದ ರಸ್ತೆಗೆ ಸಂಬಂಧಿಸಿದ ರಚನೆಗಳನ್ನು ನಿರ್ಮಿಸಬೇಕಿದ್ದಲ್ಲಿ ಅವುಗಳಿಂದ ಕೆರೆಯ ವಿನ್ಯಾಸಿತ ಸಾಮರ್ಥ್ಯವನ್ನು ಪುನರ್ ಸ್ಥಾಪಿಸಲು ತೆಗೆದುಕೊಳ್ಳಲಾಗುವ ಕ್ರಮಗಳ ಪ್ರಸ್ತಾವನೆಗಳೊಂದಿಗೆ ಸರ್ಕಾರ ಹಾಗೂ ಪ್ರಾಧಿಕಾರದ ಅನುಮೋದನೆಗಾಗಿ ಸಲ್ಲಿಸುವುದು,
6. ಕೆರೆ ಗಡಿಗಳನ್ನು ಗುರುತುಪಡಿಸಿರುವ ಹಾಗೂ ಕೆರೆಯಲ್ಲಿ ಯಾವುದೇ ಒತ್ತುವರಿ ಇರುವುದಿಲ್ಲವೆಂಬ ಬಗ್ಗೆ ದೃಢೀಕರಣ ಪ್ರತಿಯನ್ನು ವರದಿಯೊಂದಿಗೆ ಸಲ್ಲಿಸುವುದು.
7. ಕೆರೆಗಳಿಗೆ ನೇರವಾಗಿ ಅಥವ ಪರೋಕ್ಷವಾಗಿ ಯಾವುದೇ ಭಾದಕವಾಗುವ ಅಂಶಗಳನ್ನು ಯೋಜನೆಯಲ್ಲಿ ಸೇರಿಸತಕ್ಕದ್ದಲ್ಲ.
8. ಕೆರೆ ಅಭಿವೃದ್ಧಿಯಲ್ಲಿ ಸಮುದಾಯಗಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು ತೆಗೆದು ಕೊಳ್ಳಲಾಗುವ ಕ್ರಮಗಳ ವಿವರಗಳನ್ನು ಯೋಜನಾ ವರದಿಯಲ್ಲಿ ನೀಡಬೇಕಿರುತ್ತದೆ.

Circular

19/3

**ವರದಿಯಲ್ಲಿ ಈ ಕೆಳಗಿನ ವಿವರಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.**

1. ಯೋಜನೆಯನ್ನು ಪ್ರಸ್ತಾಪಿಸಿರುವ ಪ್ರಾಧಿಕಾರ/ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಇತರ ಕೆರೆಗಳ ಪರಿಸ್ಥಿತಿ ಹಾಗೂ ಅವುಗಳ ಅಭಿವೃದ್ಧಿ ಅವಶ್ಯಕತೆ ಬಗೆಗಿನ ವಾಸ್ತವಿಕ ವಿವರಗಳು.
2. ಸದರಿ ಕೆರೆಯನ್ನು ಆದ್ಯತೆಯ ಮೇಲೆ ಪರಿಗಣಿಸಲಾಗಿರುವುದಕ್ಕೆ ಕಾರಣಗಳು.
3. ಪ್ರಸ್ಥಾಪಿತ ಯೋಜನೆಯ ಮೂಲ ಉದ್ದೇಶಗಳ ವಿವರಣೆ.
4. ಕೆರೆಯ ವಿನ್ಯಾಸಿತ ಸಾಮರ್ಥ್ಯ.
5. ಕೆರೆಯ ಹಾಲಿ ಸಾಮರ್ಥ್ಯ.
6. ಕೆರೆಯ ಪೂರ್ವ ಸಾಮರ್ಥ್ಯವನ್ನು ಸ್ಥಾಪಿಸಲು ಯೋಜನೆಯಲ್ಲಿ ಅಳವಡಿಸಿ ಕೊಳ್ಳಲಾಗಿರುವ ಅಂಶಗಳ ಸಂಕ್ಷಿಪ್ತ ವಿವರ.
7. ಯೋಜನಾ ವರದಿಯಲ್ಲಿ ಸೇರಿಸಿಕೊಳ್ಳಲಾಗಿರುವ ಎಲ್ಲಾ ಅವಕಾಶಗಳ (Provisions) ಅವಶ್ಯಕತೆ ಮತ್ತು ಅವುಗಳಿಂದ ಯೋಜನೆಯ ಉದ್ದೇಶ ಸಾಧನೆಯಾಗುವ ಬಗ್ಗೆ ವಿವರಗಳು.

ಮು.ತಿ.ನೋ

ನೆಲ ಮಹಡಿ, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಕಟ್ಟಡ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು-560024.
ದೂರವಾಣಿ: 080-23513711/12, 080-22034173 ಈಮೇಲ್-tankdevelopmentauthorityk@gmail.com

19/3/18

**ಅಭಿವೃದ್ಧಿ ಯೋಜನೆಯಲ್ಲಿ ಅಳವಡಿಸಿಕೊಳ್ಳಲೇಬೇಕಾದ ಅತ್ಯವಶ್ಯಕ ಅಂಶಗಳು**

1. ಕೆರೆಯ ಗಡಿಗಳನ್ನು ಗುರುತಿಸಿ, ಗಡಿಗಳನ್ನು ಒತ್ತುವರಿಯಿಂದ ಪ್ರತಿಬಂಧಿಸುವ ಅಂಶಗಳು.
2. ಮಳೆ ನೀರು ಸ್ವಾಭಾವಿಕವಾಗಿ ಕೆರೆಯೊಳಗೆ ಹರಿದು ಬರಲು ಅವಶ್ಯಕ ಕಾಲುವೆಗಳ ಅಭಿವೃದ್ಧಿ.
3. ಕೆರೆಯ ವೇಸ್ಟ್‌ವಿಯರ್ ಮತ್ತು ತೂಬುಗಳ ನವೀಕರಣ.
4. ಕೆರೆ ಏರಿ ಬಲಗೊಳಿಸುವ ಮತ್ತು ಕೆರೆ ಏರಿಯ ಮುಂಭಾಗದ ಮತ್ತು ಹಿಂಭಾಗದ ಇಳಿಜಾರುಗಳನ್ನು ಅವಶ್ಯಕ ರಿವಿಟ್‌ಮೆಂಟ್ ಮತ್ತು ಹುಲ್ಲು ಹಾಸಿನಿಂದ ಸಂರಕ್ಷಿಸುವ ಕಾಮಗಾರಿ.
5. ಕೆರೆಗಳನ್ನು ಪೂರ್ವಸ್ಥಿತಿಗೆ ತರಲು ಅವಶ್ಯಕವಾದ ಇನ್ನಿತರ ಕಾಮಗಾರಿಗಳು.
6. ಸಂಸ್ಕರಿಸದಿರುವ ಚರಂಡಿ ನೀರು ಕೆರೆಗೆ ಹರಿದು ಬರುವುದನ್ನು ಪ್ರತಿಬಂಧಿಸುವ ಅಂಶಗಳು.

ಈ ಮೇಲಿನ ಅಂಶಗಳನ್ನು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ-2014 ರಲ್ಲಿನ ವಿವಿಧ ಪ್ರಕರಣಗಳ ವಿವರಣೆಗಳ ಆಧಾರದಲ್ಲಿ ಸಿದ್ಧಪಡಿಸಲಾಗಿದ್ದು, ಅಧಿನಿಯಮದ 31ನೇ ಪ್ರಕರಣದಂತೆ **"ಅಧಿನಿಯಮದಡಿಯಲ್ಲಿಯ ಒಂದು ಅಪರಾಧವನ್ನು ಸರ್ಕಾರದ ಯಾವುದೇ ಇಲಾಖೆ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಮಾಡಿದ್ದಲ್ಲಿ, ಸರ್ಕಾರದ ಇಲಾಖೆಯ ಮುಖ್ಯಸ್ಥ ಅಥವಾ ಅಂಥ ಸ್ಥಳೀಯ ಅಥವಾ ಸಂದರ್ಭಾನುಸಾರವಾಗಿ ಇತರ ಪ್ರಾಧಿಕಾರದ ಪ್ರಭಾರದಲ್ಲಿರುವ (ಯಾವುದೇ ಹೆಸರಿನಿಂದ ಕರೆಯಲ್ಪಡುವ) ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಆತನ ವಿರುದ್ಧ ಕೈಗೊಳ್ಳಲಾಗುವ ಕ್ರಮಗಳಿಗೆ ಆತನು ಬದ್ಧನಾಗಿರತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡನೀಯನಾಗತಕ್ಕದ್ದು".**

14/3

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ.

ಪ್ರತಿಯನ್ನು :

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆ ರವರ ಮಾಹಿತಿಗಾಗಿ ಸಲ್ಲಿಸಿದೆ.
2. ನಗರ ಮತ್ತು ಯೋಜನಾ ನಿರ್ದೇಶಕರು, ಬಹುಮಹಡಿ ಕಟ್ಟಡ, ೪ನೇ ಹಂತ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು.
3. ಎಲ್ಲಾ ಆಯುಕ್ತರು, ನಗರ/ಸ್ಥಳೀಯ ಯೋಜನಾ ಪ್ರಾಧಿಕಾರಗಳು.
4. ಎಲ್ಲಾ ಹೆಸರಿಸಲಾದ ಅಧಿಕಾರಿ ಮತ್ತು ಪ್ರಾಧಿಕೃತ ಅಧಿಕಾರಿಗಳು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ.
5. ಕಡತಕ್ಕೆ.

ನೆಲ ಮಹಡಿ, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಕಟ್ಟಡ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು-560024.
ದೂರವಾಣಿ: 080-23513711/12, 080-22034173 ಈಮೇಲ್-tankdevelopmentauthorityk@gmail.com

**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 05 ಟಿಟಿಪಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ: 02.03.2018

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ
ವಿಕಾಸೌಧ, ಬೆಂಗಳೂರು.

ಇವರಿಗೆ:
1) ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ವಿ.ವಿ.ಟವರ್, ಬೆಂಗಳೂರು.

2) ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ,
ಎಂ.ಎಸ್.ಬಿಲ್ಡಿಂಗ್, ಬೆಂಗಳೂರು.

ಮಾನ್ಯರೆ,

ವಿಷಯ: ಖಾತೆ, ಬಡಾವಣೆ ಅನುಮೋದನೆ ಹಾಗೂ ಭೂ ಉಪಯೋಗ ಬದಲಾವಣೆ ಕುರಿತು ನಿರ್ದೇಶನ ನೀಡುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಖಾತೆ, ಬಡಾವಣೆ ಅನುಮೋದನೆ ಹಾಗೂ ಭೂ ಉಪಯೋಗ ಬದಲಾವಣೆ ವಿಷಯಗಳಿಗೆ ಸಂಬಂಧಿಸಿದಂತೆ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಮತ್ತು ಪೌರಾಡಳಿತ ನಿರ್ದೇಶನಾಲಯದಿಂದ ಸೂಚನೆಗಳು / ಸುತ್ತೋಲೆಗಳನ್ನು ಹೊರಡಿಸಲಾಗುತ್ತಿದ್ದು, ಇನ್ನು ಮುಂದೆ ಸರ್ಕಾರದ ಅನುಮೋದನೆ ಪಡೆಯದೇ ಇಂತಹ ಯಾವುದೇ ಸೂಚನೆ ಅಥವಾ ಸುತ್ತೋಲೆಗಳನ್ನು ಹೊರಡಿಸಬಾರದೆಂದು ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 116 ಬೆಮಪ್ರಾ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, 4ನೇ ಮಹಡಿ,
ಬೆಂಗಳೂರು, ದಿನಾಂಕ:26.09.2017

4496
4/10/17
ಬೆಂಗಳೂರು

## ಸುತ್ತೋಲೆ

ವಿಷಯ: ಸ್ಥಳೀಯ ಸಂಸ್ಥೆಗಳು ಆಶ್ರಯ ಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಕೋರಿ ಸ್ಥಳೀಯ ಯೋಜನಾ ಪ್ರಾಧಿಕಾರಗಳಿಗೆ ಸಲ್ಲಿಸುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಭರಿಸಿಕೊಳ್ಳುವ ಶುಲ್ಕಗಳಿಗೆ ವಿನಾಯಿತಿ ನೀಡುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರ ಪತ್ರ ಸಂಖ್ಯೆ: DTCP-251-MISC-2016-17, ದಿನಾಂಕ: 13.04.2017 ಮತ್ತು 31.12.2016.

*********

ಆಶ್ರಯ ಯೋಜನೆಯಡಿ ನಿವೇಶನಗಳನ್ನು ರಚಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಸ್ಥಳೀಯ ಸಂಸ್ಥೆಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಕೋರಿ ಸ್ಥಳೀಯ ಯೋಜನಾ ಪ್ರಾಧಿಕಾರಗಳಿಗೆ ಪ್ರಸ್ತಾವನೆ ಸಲ್ಲಿಸುತ್ತಿರುವ ಪ್ರಕರಣಗಳಲ್ಲಿ ಭರಿಸಿಕೊಳ್ಳುವ ಶುಲ್ಕಗಳಿಗೆ ವಿನಾಯಿತಿ ನೀಡುವಂತೆ ಕೋರಿ ಸ್ಥಳೀಯ ಸಂಸ್ಥೆಗಳು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುತ್ತಿವೆ. ಆದುದರಿಂದ, ಸ್ಥಳೀಯ ಸಂಸ್ಥೆಗಳು ರಾಜ್ಯ ಸರ್ಕಾರದ–ಅಂಗ ಸಂಸ್ಥೆಗಳಾಗಿರುವುದರಿಂದ, ಇಂತಹ ಪ್ರಸ್ತಾವನೆಗಳಿಗೆ ಮಾತ್ರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 18(1) ರನ್ವಯ ವಿಧಿಸುವ ಶುಲ್ಕಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 18(3)ರಲ್ಲಿ ಕಲ್ಪಿಸಿರುವ ಅವಕಾಶಗಳಂತೆ ವಿನಾಯಿತಿ ನೀಡಲು ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 18–ಎ(1) ರನ್ವಯ ಭರಿಸಿಕೊಳ್ಳುವ ಕರಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 18–ಎ(5)ರಲ್ಲಿ ಕಲ್ಪಿಸಿರುವ ಅವಕಾಶಗಳಂತೆ ವಿನಾಯಿತಿ ನೀಡಲು ಕ್ರಮವಹಿಸುವಂತೆ ಸೂಚಿಸಿದೆ.

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ:

1) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
2) ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.
3) ಆಯುಕ್ತರು, ಎಲ್ಲಾ ಮಹಾನಗರ ಪಾಲಿಕೆಗಳು.
4) ಆಯುಕ್ತರು, ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
5) ಸದಸ್ಯ ಕಾರ್ಯದರ್ಶಿ, ಎಲ್ಲಾ ಯೋಜನಾ ಪ್ರಾಧಿಕಾರಗಳು.- ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರ ಮುಖಾಂತರ.
6) ಪೌರಾಯುಕ್ತರು, ಎಲ್ಲಾ ಪುರಸಭಾ ಯೋಜನಾ ಪ್ರಾಧಿಕಾರಗಳು.
7) ಎಲ್ಲಾ ಸ್ಥಳೀಯ ಸಂಸ್ಥೆಗಳು.-ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು, ಇವರ ಮುಖಾಂತರ
8) ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು.